ಅಲ್ಲದೆ ಅವನು ಇನ್ನೊಂದು ವಿಷಯವನ್ನು ಸಹ ಓದಿದ್ದ: 'ಬುದ್ಧಿಪೂರ್ವಕವಾಗಿ ಯಾವ ವ್ಯಕ್ತಿ ವಿಷಯವನ್ನು ಅರಿಯುವುದಿಲ್ಲವೋ, ಅವನು ಮೂರ್ಖ.' ತಾನು ಮೂರ್ಖನಾಗಲಾರೆ ಎಂದು ಹರಿಲಾಲನಿಗೆ ಅನ್ನಿಸಿತು. ಯಾರು ಬಾಪೂ ಅವರ ಮಾತುಗಳನ್ನು 'ತಿಳಿವಳಿಕೆಯಿಂದ' ಅರ್ಥ ಮಾಡಿಕೊಳ್ಳಲಾರರೋ, ಅವನು ಬೇರೊಂದು ಮಾರ್ಗವನ್ನು ಸ್ವೀಕರಿಸಬೇಕು.

ದಿನೇದಿನೇ ಹರಿಲಾಲ ಮತ್ತೂ ಹೆಚ್ಚು ಉದ್ವಿಗ್ನಗೊಳ್ಳುತ್ತಿದ್ದ. ಹಗಲುರಾತ್ರಿ ನಿತ್ಯ ಹಿಂದೂಸ್ತಾನಕ್ಕೆ ಹೋಗಲು ಮನಸ್ಸು ಮಾಡಲಾರಂಭಿಸಿದ. ತಾನು ಹಿಂದೂಸ್ತಾನಕ್ಕೆ ಹೋಗಿ ತನ್ನ ಅಪೂರ್ಣ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಬೇಕು ಎಂಬ ವಿಷಯ ಅವನ ಮನಸ್ಸಿನಲ್ಲಿ ಮನೆ ಮಾಡಿತು. ಇದುವರೆಗೆ ಬಾಪೂ ಅವರು ತನಗೆಂದೂ ಇಂಥ ಶಿಕ್ಷಣಕ್ಕೆ ಹುರಿದುಂಬಿಸಿರಲಿಲ್ಲ ಎಂಬುದು ನಿರ್ವಿವಾದವಾಗಿತ್ತು. ಇನ್ನೊಂದು ಕಠೋರ ಸತ್ಯವೆಂದರೆ, ಬಾಪೂ ಅವರು ಯಾವ ಮಗ್ಗುಲನ್ನು ಒಪ್ಪಿಕೊಂಡಿದ್ದರೋ, ಅದರಂತೆ ತಾನು ನಡೆಯಲು ಸಾಧ್ಯವಿಲ್ಲ. ಮನಸ್ಸಿಗೆ ದ್ರೋಹವೆಸಗಿಕೊಂಡು ಅವರೊಂದಿಗೆ ನಡೆಯುವುದು ತಪ್ಪೇ ಆಗುವುದು.

ಮೋಸ, ಆಡಂಬರ ಎಂದೂ ಮಾಡಬಾರದೆಂದು ಸ್ವತಃ ಬಾಪೂ ಅವರು ಕಲಿಸಿದ್ದರು. ಒಂದು ವೇಳೆ ನಮ್ಮ ಮಾತು ಎದುರಿನ ವ್ಯಕ್ತಿಗೆ ಹಿಡಿಸದಿದ್ದರೂ ನಿರ್ಭಯದಿಂದ ನಮ್ಮ ಮಾತನ್ನು ಹೇಳುವ ಶಿಕ್ಷಣವನ್ನು ಬಾಪೂ ಅವರು ನೀಡಿರಲಿಲ್ಲವೇ? ಹೀಗಿರುವಾಗ ಇದೇ ಶಿಕ್ಷಣವನ್ನು ಆಧಾರವಾಗಿಟ್ಟುಕೊಂಡು ಹರಿಲಾಲ ಸಹ ಯಾಕೆ ತನ್ನ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳಬಾರದು? ಇದರಲ್ಲಿ ತಪ್ಪೇನಿದೆ? ಆಂಗ್ಲ ಪದ್ಧತಿಯ ಶಿಕ್ಷಣವನ್ನು ಪಡೆಯುವುದರಲ್ಲಿ ಕೆಡುಕೇನಿದೆ? ಅಲ್ಲದೆ ಈ ಅಧ್ಯಯನದ ನಂತರ ಜಗತ್ತಿನ ಸುಖವನ್ನು ಅನುಭವಿಸುವಲ್ಲಿ ಸಹ ಏನು ಕೆಡುಕಿದೆ? ತಾನೇ ಖುದ್ದು ತನ್ನ ಕಾಲುಗಳ ಮೇಲೆ ನಿಂತು ತನ್ನ ಜೀವನದ ಹಾದಿಯನ್ನು ಯಾಕೆ ಆಯ್ಕೆ ಮಾಡಿಕೊಳ್ಳಬಾರದು?

ಈ ಬಗ್ಗೆ ನಿರ್ಧಾರವನ್ನು ತೆಗೆದುಕೊಳ್ಳಲು ಸಾಧ್ಯವಾಗದಂಥ ಪರಿಸ್ಥಿತಿಯಿಂದಾಗಿ ಹರಿಲಾಲ ಒಮ್ಮೆಲೆ ಬೇಸರಗೊಂಡ. ಫೀನಿಕ್ಸ್ ಆಶ್ರಮಕ್ಕೆ ಹೋಗಿ ಬಾ ಅವರಿಗೆ ಎಲ್ಲವನ್ನೂ ಹೇಳಬೇಕೆಂಬ ತೀವ್ರ ಇಚ್ಛೆ ಸಹ ಜಾಗೃತಗೊಳ್ಳುತ್ತಿತ್ತು. ಆದರೆ ಹರಿಲಾಲನಿಗೆ ಬಾ ಅವರ ಪರಿಸ್ಥಿತಿಯ ಅರಿವಿತ್ತು. ಬಾಪೂ ಅವರ ಆಗ್ರಹಕ್ಕೆ ಪ್ರತಿಯಾಗಿ ಬಾ ಏನೂ ಹೇಳುತ್ತಿರಲಿಲ್ಲ, ಮಾತನಾಡುತ್ತಲೂ ಇರಲಿಲ್ಲ. ಅಲ್ಲದೆ ಇನ್ನು ಕೆಲವೇ ದಿನಗಳಲ್ಲಿ ಬಾ ಅವರು ಟಾಲ್‌ಸ್ಟಾಯ್ ಆಶ್ರಮಕ್ಕೆ ಬರುವವರಿದ್ದರು. ತನ್ನ ದುಃಖವನ್ನು ಬಾ ಅವರೆದುರು ಹೇಳಿಕೊಂಡು ಬಾ ಅವರ ಕಷ್ಟವನ್ನು ಹೆಚ್ಚು ಮಾಡಿದಂತಾಗುವುದು. ತನ್ನ ಸಮಸ್ಯೆಯಂತೂ ಬಗೆಹರಿಯುವುದಿಲ್ಲ, ಅಲ್ಲದೆ ಬಾ ಅವರ ಚಿಂತೆಗಳು ಸಹ ಹೆಚ್ಚುತ್ತವೆ.

ಕಡೆಗೊಂದು ದಿನ ಹರಿಲಾಲ ಆಶ್ರಮವನ್ನು ತ್ಯಜಿಸಿ ಜೋಹಾನ್ಸ್‌ಬರ್ಗ್‌ಗೆ ಹೊರಟು ಹೋದ. ಜೈಲಿನಲ್ಲಿ ಅವನ ಸಂಗಾತಿಗಳಾದ ಪರಾಗರು, ಜೋಸೆಫ್ ರೋಯಪನ್ ಮತ್ತು ಸುರೇಂದ್ರ ಮೇಢೆ ಜೋಹಾನ್ಸ್‌ಬರ್ಗ್‌ನಲ್ಲಿದ್ದರು. ಇವರೆಲ್ಲರೊಂದಿಗೆ ಹರಿಲಾಲನ ಗೆಳೆತನ ಘನಿಷ್ಠವಾಗಿತ್ತು.

ಈ ಗೆಳೆಯರನ್ನು ಭೇಟಿಯಾದರೆ ತನ್ನ ಮನಸ್ಸಿಗೆ ಸ್ವಲ್ಪ ನೆಮ್ಮದಿ ಸಿಗಬಹುದೆಂದು ಹರಿಲಾಲನಿಗೆ ಅನ್ನಿಸಿತು. ಹರಿಲಾಲ ಜೋಹಾನ್ಸ್‌ಬರ್ಗ್‌ಗೆ ಬಂದ ನಂತರ ಮೊದಲು ಜೋಸೆಫ್ ರೋಯಪನ್‌ನನ್ನು ಭೇಟಿಯಾಗಲು ಹೋದ. ಜೋಸೆಫ್ ಹರಿಲಾಲನೊಂದಿಗೆ ಜೈಲಿನಲ್ಲಿದ್ದ. ಹರಿಲಾಲ ಹಿಂದೂಸ್ತಾನದಿಂದ ಬಂದು ಹೋರಾಟದಲ್ಲಿ ಸೇರಿಕೊಳ್ಳುವುದಕ್ಕೂ ಮೊದಲೇ ಜೋಸೆಫ್ ಹೋರಾಟದಲ್ಲಿ ಸಕ್ರಿಯನಾಗಿದ್ದ. ಭಾರತೀಯ ಮೂಲದ ತಂದೆತಾಯಿಯ ಮಗನಾಗಿದ್ದ ಜೋಸೆಫ್ ಆಫ್ರಿಕಾದಲ್ಲಿಯೇ ಜನಿಸಿದ್ದ. ಅವನಿಗೆ ಆಫ್ರಿಕಾ ಜನ್ಮಭೂಮಿ ಮತ್ತು ಕರ್ಮಭೂಮಿ ಎರಡೂ ಆಗಿದ್ದವು. ವಾಸ್ತವವಾಗಿ ಬಾಪೂ ಅವರೊಂದಿಗೆ ಅವನ ಪರಿಚಯ ವ್ಯಾವಹಾರಿಕವಾಗಿತ್ತು. ಜೋಸೆಫ್ ಸಹ ವಿದೇಶಕ್ಕೆ ಹೋಗಿ ಬ್ಯಾರಿಸ್ಟರ್ ಆಗಿ ಮರಳಿ ಬಂದಿದ್ದ, ಆದರೆ ಬಾಪೂ ಅವರು ಹೋರಾಟದ ಕಹಳೆಯನ್ನು ಊದಿದಾಗ ಅವರೊಂದಿಗೆ ಸೇರಿಕೊಂಡ. ಅವನು ಬ್ಯಾರಿಸ್ಟರ್ ಆಗಿ ಸಾಕಷ್ಟು ಹಣವನ್ನು ಗಳಿಸಿದ. ಅವನ ರೀತಿನೀತಿ, ನಡೆನುಡಿ ಎಲ್ಲವೂ ಬ್ರಿಟಿಷರಂತಿದ್ದವು. ಆದರೆ ಅವನು ಬಾಪೂ ಅವರೊಂದಿಗೆ ಆಶ್ರಮವಾಸಿಯಾಗಿದ್ದ. ಟಾಲ್‌ಸ್ಟಾಯ್ ಫಾರ್ಮ್ ನಿರ್ಮಾಣದಲ್ಲಿ ಅವನದೇ ಕೊಡುಗೆಯಿತ್ತು. ಅವನಿಗೆ ಹರಿಲಾಲನ ಬಗ್ಗೆ ವಿಶೇಷ ಸ್ನೇಹವಿತ್ತು.

ಹರಿಲಾಲ ಹೋರಾಟದಲ್ಲಿ ಯಾವ ವೇಗದಿಂದ ಮುನ್ನುಗ್ಗಿದ್ದನೋ, ಅದನ್ನು ನೋಡಿ ಜೋಸೆಫ್ ಪ್ರಭಾವಿತನಾಗಿದ್ದ. ಅವನು ಅನೇಕ ಬಾರಿ ಹರಿಲಾಲನೊಂದಿಗೆ ಕೂತು ಸ್ನೇಹಭಾವನೆಯಿಂದ ಮಾತನಾಡುತ್ತಿದ್ದ.

ಹರಿಲಾಲನೂ ಸಹ ಜೋಸೆಫ್‌ನ ಸ್ವಚ್ಛ, ಗರ್ವರಹಿತ ಮತ್ತು ಸರಳ ಮಾತುಗಳನ್ನು ಕೇಳುವುದಕ್ಕೆ ಇಷ್ಟಪಡುತ್ತಿದ್ದ. ಹರಿಲಾಲ ಜೈಲಿನಿಂದ ಬಿಡುಗಡೆಯಾದ ನಂತರ ಟಾಲ್‌ಸ್ಟಾಯ್ ಫಾರ್ಮ್‌ಗೆ ಹೊರಟು ಹೋಗಿದ್ದ; ಆಗ ಜೋಸೆಫ್ ಜೋಹಾನ್ಸ್‌ಬರ್ಗ್‌ನಲ್ಲಿಯೇ ಉಳಿದಿದ್ದ, ಹೀಗಾಗಿ ಇಬ್ಬರು ಪರಸ್ಪರ ಭೇಟಿಯಾಗದೆ ತುಂಬಾ ದಿನಗಳು ಸಂದಿದ್ದವು.

'ಓಹ್ ಹರಿಲಾಲ್' ಜೋಸೆಫ್ ಹರಿಲಾಲನ ಕೈಯನ್ನು ಹಿಡಿದು ಪ್ರೀತಿಯಿಂದ ಕುಲುಕಿದ, 'ಮಿತ್ರ, ಇಷ್ಟು ದಿನ ಟಾಲ್‌ಸ್ಟಾಯ್ ಫಾರ್ಮ್‌ನಲ್ಲಿದ್ದು ಏನು ಮಾಡುತ್ತಿದ್ದೀಯ? ನಾನು ಮಿಸ್ಟರ್ ಗಾಂಧಿಯವರನ್ನು, 'ಈ ಯಂಗ್‌ಮ್ಯಾನನ್ನು ಆಶ್ರಮದಲ್ಲಿಯೇ ಯಾಕೆ ಉಳಿಸಿಕೊಂಡಿದ್ದೀರ?' ಎಂದು ನಿತ್ಯ ಕೇಳುತ್ತಿದ್ದೆ.'

'ಏನಿಲ್ಲ...ಹಾಗೇ...' ಹರಿಲಾಲ ಬೇಸರದಿಂದ ಹೇಳಿದ, 'ವಿಶೇಷವಾಗಿ ಯಾವ ಕೆಲಸ ಮಾಡಲೂ ಹೊಳೆಯುತ್ತಿಲ್ಲ, ಅದಕ್ಕೇ...'

'ಕೆಲಸ ಹೊಳೆಯುವುದಿಲ್ಲ?' ಜೋಸೆಫ್‌ಗೆ ಆಶ್ಚರ್ಯವಾಯಿತು, 'ಇಲ್ಲಿ ಕೆಲಸದ ರಾಶಿಯೇ ಇದೆ, ನಿನಗೆ ಕೆಲಸವೇ ಹೊಳೆಯುತ್ತಿಲ್ಲವೇ? ನಿನ್ನ ಆರೋಗ್ಯ ಸರಿಯಿದೆ ತಾನೇ? ನೀನು ತುಂಬಾ ಸೊರಗಿದ್ದೀಯ, ಇದೇನು ಇಷ್ಟು ನಿರಾಸೆಯಿಂದ ಮಾತನಾಡುತ್ತಿದ್ದೀಯ, ಯಾಕೆ?

'ವಿಷಯ ಹಾಗಿದೆ, ಜೋಸೆಫ್. ಮನಸ್ಸಿಗೆ ನಿರಾಸೆಯಾಗಿದೆ...'

'ಹರಿಲಾಲ,' ಜೋಸೆಫ್ ಅವನ ಕೈಹಿಡಿದು ಸ್ನೇಹದಿಂದ ತನ್ನ ಬಳಿ ಅವನನ್ನು ಕೂರಿಸಿಕೊಂಡ, 'ನೀನು ಇಷ್ಟು ನಿರಾಸೆ ತಾಳಲು ಕಾರಣವೇನು? ಒಂದು ವೇಳೆ ನನ್ನಿಂದ ಸಹಾಯ ಬೇಕಿದ್ದರೆ ನನ್ನನ್ನು ಕೇಳು.'

'ನನ್ನ ಕೆಲಸವೊಂದನ್ನು ಮಾಡುತ್ತೀಯ?' ಹರಿಲಾಲ ಅಕಸ್ಮಾತ್ ಕೇಳಿದ.

'ಸಂಕೋಚಪಡದೆ ಕೇಳು, ನನ್ನನ್ನು ನಿನ್ನ ಅಣ್ಣನೆಂದು ತಿಳಿ.' ಜೋಸೆಫ್ ಧೈರ್ಯವನ್ನು ಹೇಳಿದ.

'ಜೋಸೆಫ್!' ಹರಿಲಾಲನ ಮನಸ್ಸಿನಲ್ಲಿ ಇಷ್ಟು ದಿನಗಳಿಂದ ಜಮಾಯಿಸಿದ್ದ ದುಃಖ ಹೊರ ಬಂತು, 'ನಾನೀಗ ಸ್ವದೇಶಕ್ಕೆ ಮರಳಿ ಹೋಗಬೇಕೆಂದು ಬಯಸುತ್ತೇನೆ. ಈಗ ಇಲ್ಲಿ ನನ್ನ ಮನಸ್ಸು ಬೇಸರಗೊಂಡಿದೆ. ನಾನಿಲ್ಲಿರುವಂತೆ ಎಂದೂ ಸಹ ನನ್ನ ಕಾಲ ಮೇಲೆ ನಾನು ನಿಲ್ಲಲಾರೆ. ನಾನು ಜೀವಮಾನವಿಡಿ ಇನ್ನೊಬ್ಬರ ನೆರಳಾಗಿ ಬದುಕಲು ಬಯಸುವುದಿಲ್ಲ. ನಾನು ಅಧ್ಯಯನ ಮಾಡಬೇಕು...ಅಲ್ಲದೆ...ಹಣವನ್ನೂ ಗಳಿಸಬೇಕು. ನೀನು ಗಳಿಸಿದ ವಿಧಾನದಂತೆಯೇ...'

'ಹೀಗೋ? ಹರಿಲಾಲ, ನೀನೇನು ಹೇಳುತ್ತಿದ್ದೀಯ?' ಜೋಸೆಫ್‌ಗೆ ಆಶ್ಚರ್ಯವಾಯತು, 'ನೀನಿಲ್ಲಿಂದ ಹೋಗುವುದಕ್ಕೆ ತೀರ್ಮಾನಿಸಿದ್ದೀಯ?'

'ಹೌದು.' ಹರಿಲಾಲ ದೃಢ ಮನಸ್ಸಿನಿಂದ ಹೇಳಿದ, 'ಬಾಪೂ ಅವರು ನನ್ನನ್ನು ಬಹುಶಃ ಸಂತೋಷದಿಂದ ಹೋಗಲು ಬಿಡುವುದಿಲ್ಲ. ಬಾ ಸಹ ಅನುಮತಿಯನ್ನು ಕೊಡುವುದಿಲ್ಲ. ಆದರೆ ಇಲ್ಲಿ ನನ್ನ ಮನಸ್ಸು ಸಂಪೂರ್ಣವಾಗಿ ವೈರಾಗ್ಯವನ್ನು ಪಡೆದಿದೆ. ನಾನು ಬಾಪೂ ಅವರಿಗೆ ಹೇಳದೆ ಇಲ್ಲಿಂದ ಹೊರಟು ಹೋಗುತ್ತೇನೆ. ನಾನು ಹೋದ ನಂತರ ನೀನು ಬಾಪೂ ಅವರಿಗೆ ವಿಷಯವನ್ನು ತಿಳಿಸು, ಅವರು ನನ್ನ ಬಗ್ಗೆ ಯೋಚನೆ ಮಾಡಬಾರದು.'

'ಆದರೆ ನೀನು ಹೀಗೆ ಮಾಡಲು ಕಾರಣವೇನು?' ಜೋಸೆಫ್‌ಗೆ ಹರಿಲಾಲನ ಈ ವರ್ತನೆ ಅರ್ಥವಾಗಿರಲಿಲ್ಲ.

'ಇನ್ನು ಈ ದೇಶದ ಅನ್ನದ ಋಣ ತೀರಿತೆಂದು ತಿಳಿ.' ಹರಿಲಾಲ ಉದಾಸೀನತೆಯಿಂದ ಹೇಳಿದ, 'ನಾನು ನನ್ನ ಕಾಲ ಮೇಲೆ ನಿಲ್ಲಬೇಕೆಂದು ಬಾಪೂ ಅವರು ಸದಾ ಹೇಳುತ್ತಾರೆ, ಹೀಗಾಗಿ ಇದನ್ನು ತೀರ್ಮಾನಿಸಿದ್ದೇನೆ. ಬಾ ಮತ್ತು ಬಾಪೂ ಅವರ ಆಶೀರ್ವಾದ ಪಡೆದು ಹೋಗಿದ್ದರೆ ಚೆನ್ನಾಗಿತ್ತು, ಆದರೆ ನನ್ನ ದುರದೃಷ್ಟದಿಂದ ಇದು ಸಾಧ್ಯವಿಲ್ಲ. ನೀನು ನಿನ್ನ ಶುಭವನ್ನು ನನಗೆ ಕೋರು, ಜೋಸೆಫ್.'

**(ಸಶೇಷ)**